**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್**

ತನ್ನ **ಕಲಾ ಶಿಕ್ಷಣ** ಕಾರ್ಯಕ್ರಮದ ಅಡಿಯಲ್ಲಿ

ಭಾರತದಲ್ಲಿನ ಸರ್ಕಾರಿ ಅನುದಾನಿತ ಮತ್ತು ಲಾಭರಹಿತ ಶಾಲೆಗಳಿಂದ

**ಕಲಾ-ಸಮನ್ವಿತ ಯೋಜನೆಗಳಿಗಾಗಿ**

ಪ್ರಸ್ತಾಪನೆಗಳನ್ನು ಆಹ್ವಾನಿಸುತ್ತದೆ

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ನವೆಂಬರ್ 30, 2026**

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ ಎಫ್ ಏ) ಕಲಾ ಶಿಕ್ಷಣದ ಮೂಲಕ ಬೋಧನೆ ಮತ್ತು ಕಲಿಕೆಯನ್ನು ಬಲಪಡಿಸಲು ಭಾರತದಾದ್ಯಂತ ಮಹಾನಗರಗಳ ಹೊರತಾದ ಪ್ರದೇಶಗಳಲ್ಲಿ ಇರುವ ಸರ್ಕಾರಿ ಅನುದಾನಿತ ಮತ್ತು ಲಾಭರಹಿತ ಶಾಲೆಗಳಲ್ಲಿ ಕಲಾ-ಸಮನ್ವಿತ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಯಸುತ್ತದೆ.

ಕಲಿ ಕಲಿಸು ಕಲಾ ಶಿಕ್ಷಣ ಕಾರ್ಯಕ್ರಮವು ಪಠ್ಯಕ್ರಮ ಆಧಾರಿತ ಬೋಧನಾ ವಿಧಾನಗಳಿಗಾಗಿ ವಿವಿಧ ಕಲಾ ಪ್ರಕಾರಗಳನ್ನು ಬಳಸುವ ಮೂಲಕ ಶಾಲೆಗಳಲ್ಲಿ ಕಲಿಕೆಯನ್ನು ಆಕರ್ಷಕ ಮತ್ತು ಆನಂದದಾಯಕ ಅನುಭವವನ್ನಾಗಿ ಮಾಡುವ ಗುರಿಯನ್ನು ಹೊಂದಿದೆ.

ಈ ಆಲೋಚನೆಗೆ ಅನುಗುಣವಾಗಿ, ಕಲಾ-ಸಮನ್ವಿತ ಬೋಧನಾ ವಿಧಾನಗಳಿಗೆ ದೃಢವಾದ ಅಡಿಪಾಯವನ್ನು ನಿರ್ಮಿಸುವ ಮತ್ತು ವಿದ್ಯಾರ್ಥಿಗಳಲ್ಲಿ ಕುತೂಹಲ ಹಾಗೂ ಸೃಜನಶೀಲತೆಯನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿರುವ ಸರ್ಕಾರಿ ಅನುದಾನಿತ ಮತ್ತು ಲಾಭರಹಿತ ಶಾಲೆಗಳಿಂದ ಐ ಎಫ್ ಏ ಯೋಜನೆಗಳ ಪ್ರಸ್ತಾಪನೆಗಳನ್ನು ಆಹ್ವಾನಿಸುತ್ತದೆ.

ಹಿಂದಿನ ವರ್ಷಗಳ ನಮ್ಮ ಕೆಲವು ಯೋಜನೆಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಇಲ್ಲಿ ಕ್ಲಿಕ್ ಮಾಡಿ.

**ಯೋಜನೆಗಳ ವ್ಯಾಪ್ತಿ:**

ಈ ಯೋಜನೆಗಳು ಈ ಕೆಳಗಿನ ಯಾವುದೇ ಒಂದು ಅಥವಾ ಹೆಚ್ಚಿನ ಉದ್ದೇಶಗಳನ್ನು ಒಳಗೊಂಡಿರಬಹುದು:

- ಸ್ಥಳೀಯ ಕಲಾ ಪ್ರಕಾರಗಳು ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ತರಗತಿಯ ಕಲಿಕೆ ಮತ್ತು ಬೋಧನೆಯೊಂದಿಗೆ ಸಮನ್ವಯಗೊಳಿಸುವುದು
- ಎಲ್ಲಾ ವಿಷಯಗಳ ಕಲಿಕೆ ಮತ್ತು ಬೋಧನಾ ಪ್ರಕ್ರಿಯೆಗಳಲ್ಲಿ ಕಲೆಯನ್ನು ಸಮನ್ವಯಗೊಳಿಸುವುದು

- ವಿದ್ಯಾರ್ಥಿಗಳ ಜೀವನದ ಅನುಭವಗಳನ್ನು ತರಗತಿಯ ಕಲಿಕೆಗೆ ಸೇರಿಸುವುದು
- ಸ್ಥಳೀಯ ಕಲಾವಿದರು ಮತ್ತು ಸಮುದಾಯದ ಸಂಪನ್ಮೂಲಗಳೊಂದಿಗೆ ಕೆಲಸ ಮಾಡುವುದು

**ಯೋಜನೆಯ ಅವಧಿ:** ಕನಿಷ್ಠ **ಒಂದು ವರ್ಷ**ದಿಂದ ಗರಿಷ್ಠ **ಒಂದು ವರ್ಷ ಆರು ತಿಂಗಳು**ಗಳವರೆಗೆ

**ಆಯವ್ಯಯ (ಬಜೆಟ್):** ಗರಿಷ್ಠ **ರೂ. 4,00,000/-** ಗಳವರೆಗೆ (ನಾಲ್ಕು ಲಕ್ಷ ರೂಪಾಯಿಗಳು)

**ಯಾರು ಅರ್ಜಿ ಸಲ್ಲಿಸಬಹುದು?**

ಮಹಾನಗರಗಳ ಹೊರತಾದ ಪ್ರದೇಶಗಳಲ್ಲಿ ಇರುವ ಸರ್ಕಾರಿ ಅನುದಾನಿತ ಅಥವಾ ಲಾಭರಹಿತ ಶಾಲೆಗಳು. ಸಂಸ್ಥೆಯು ಸ್ಥಳೀಯ ಭಾಷೆಗಳೊಂದಿಗೆ ಕೆಲಸ ಮಾಡುತ್ತಿರಬೇಕು ಮತ್ತು ಕಲೆ ಹಾಗೂ ಸಂಸ್ಕೃತಿ, ಬೋಧನೆ ಮತ್ತು ಕಲಿಕೆಯ ಅವಿಭಾಜ್ಯ ಅಂಗಗಳಾಗಿವೆ ಎಂದು ನಂಬಿರಬೇಕು.

**ಅರ್ಹತೆ:**

- ಸೊಸೈಟೀಸ್ ನೋಂದಣಿ ಕಾಯಿದೆ 1860 / ಇಂಡಿಯನ್ ಟ್ರಸ್ಟ್ ಕಾಯಿದೆ 1882 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆಯು ಶಾಲೆಯ ಮಾಲೀಕತ್ವ ಹೊಂದಿರಬೇಕು / ಶಾಲೆಯನ್ನು ನಡೆಸುತ್ತಿರಬೇಕು
- ಇದು ಕನಿಷ್ಠ ಮೂರು ವರ್ಷಗಳಿಂದ ಅಸ್ತಿತ್ವದಲ್ಲಿರಬೇಕು
- ಇದು ಕನಿಷ್ಠ ಎರಡು ವರ್ಷಗಳ ಲೆಕ್ಕಪರಿಶೋಧಿತ ಖಾತೆಗಳ ವಿವರಣೆಯನ್ನು (ಆಡಿಟೆಡ್ ಸ್ಟೇಟ್‌ಮೆಂಟ್) ಹೊಂದಿರಬೇಕು
- ಇದು ಮಾನ್ಯವಾದ ಶಾಶ್ವತ ಖಾತೆ ಸಂಖ್ಯೆಯನ್ನು (PAN) ಹೊಂದಿರಬೇಕು

**ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:**

ನಿಮ್ಮ ಪ್ರಸ್ತಾಪನೆಯನ್ನು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಬರೆಯಬಹುದು. ಇಂಗ್ಲಿಷ್ ಹೊರತುಪಡಿಸಿ ಇತರ ಭಾರತೀಯ ಭಾಷೆಗಳಲ್ಲಿನ ಯೋಜನೆಗಳನ್ನು ಐ ಎಫ್ ಏ ಪ್ರೋತ್ಸಾಹಿಸುತ್ತದೆ.

ನಿಮ್ಮ ಅಂತಿಮ ಪ್ರಸ್ತಾಪನೆಯು ಇವುಗಳನ್ನು ಹೊಂದಿರಬೇಕು:

- ಯೋಜನೆಯ ಶೀರ್ಷಿಕೆ
- ಶಾಲೆಯ ಧ್ಯೇಯ/ದೃಷ್ಟಿಕೋನ/ಸಂಕ್ಷಿಪ್ತ ಪರಿಚಯ
- ವಿದ್ಯಾರ್ಥಿಗಳ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆ

- ಪ್ರಸ್ತಾಪಿತ ಯೋಜನೆಯ ಉದ್ದೇಶಗಳು
- ಕಾರ್ಯವಿಧಾನ ಮತ್ತು ವಿವರವಾದ ಕಾರ್ಯಯೋಜನೆ
- ಯೋಜನೆಯ ಭಾಗವಾಗುವ ಸಂಪನ್ಮೂಲ ವ್ಯಕ್ತಿಗಳ ವಿವರಗಳು
- ಯೋಜನೆಯ ಮೌಲ್ಯಮಾಪನ ಪ್ರಕ್ರಿಯೆ
- ಯೋಜನೆಯಿಂದ ನಿರೀಕ್ಷಿತ ಫಲಿತಾಂಶಗಳು
- ಬಜೆಟ್‌ನ ವಿವರವಾದ ವಿಂಗಡಣೆ
- ಆಯವ್ಯಯದ (ಬಜೆಟ್) ವಿಸ್ತೃತ ವಿವರಣೆ

ಜೊತೆಯಲ್ಲಿ ಲಗತ್ತಿಸಬೇಕಾದ ದಾಖಲೆಗಳು:

- ಟ್ರಸ್ಟ್ ಡೀಡ್ / ಮೆಮೊರಾಂಡಮ್ ಆಫ್ ಅಸೋಸಿಯೇಷನ್‌ನ ಪ್ರತಿ
- ಪ್ರಸ್ತುತ ಧರ್ಮದರ್ಶಿಗಳು (ಟ್ರಸ್ಟಿಗಳು)/ಸದಸ್ಯರ ಪಟ್ಟಿ ಮತ್ತು ವೈಯುಕ್ತಿಕ ಪರಿಚಯ(ಪ್ರೊಫೈಲ್)
- 12A / ಸೊಸೈಟಿ ಕಾಯಿದೆಯಡಿಯಲ್ಲಿ ನೋಂದಣಿಯ ಪ್ರತಿ
- ಕನಿಷ್ಠ ಕಳೆದ ಎರಡು ವರ್ಷಗಳ ಆಡಿಟರ್ ವರದಿ/ಆಡಿಟ್ ಮಾಡಿದ ಲೆಕ್ಕಪತ್ರಗಳ ವಿವರಣೆ
- ಸಂಸ್ಥೆಯ PAN ಕಾರ್ಡ್‌ನ ಪ್ರತಿ
- ಹಿಂದಿನ ಅಥವಾ ಪ್ರಸ್ತುತ ಕಲಾ ಶಿಕ್ಷಣ ಚಟುವಟಿಕೆಗಳ ವಿವರಗಳು (ಏನಾದರೂ ಇದ್ದರೆ)

ಅಂತಿಮ ಪ್ರಸ್ತಾಪನೆಯನ್ನು ಕಳುಹಿಸುವ ಮೊದಲು ಶಾಲೆಯು ಯೋಜನೆಯ ಪರಿಕಲ್ಪನೆಗಳನ್ನು ಚರ್ಚಿಸಲು ಬಯಸಿದರೆ ಅಥವಾ ಅದರ ಬಗ್ಗೆ ಪ್ರಶ್ನೆಗಳನ್ನು ಹೊಂದಿದ್ದರೆ, ದಯವಿಟ್ಟು **ಅಕ್ಟೋಬರ್ 31, 2026** ರ ಮೊದಲು deepak@indiaifa.org ಗೆ ಬರೆಯಿರಿ ಅಥವಾ 9739175525 ಗೆ ಕರೆ ಮಾಡಿ (ಬೆಳಿಗ್ಗೆ 10:00 ರಿಂದ ಸಂಜೆ 05:00 ರ ನಡುವೆ).

ಎಲ್ಲಾ ಬೆಂಬಲಿತ ದಾಖಲೆಗಳೊಂದಿಗೆ ಅಂತಿಮ ಪ್ರಸ್ತಾಪನೆಯನ್ನು **ನವೆಂಬರ್ 30, 2026** ರಂದು ಅಥವಾ ಅದಕ್ಕೂ ಮೊದಲು 25 MB ಮೀರದ ಒಂದೇ ಇಮೇಲ್‌ನಲ್ಲಿ ಆನ್‌ಲೈನ್‌ನಲ್ಲಿ deepak@indiaifa.org ಗೆ ಸಲ್ಲಿಸಬೇಕು.

**ಅಪೂರ್ಣ ಪ್ರಸ್ತಾಪನೆಗಳು ಮತ್ತು ಅರ್ಹತಾ ಮಾನದಂಡಗಳ ವ್ಯಾಪ್ತಿಗೆ ಬಾರದಿರುವ ಅರ್ಜಿದಾರರ ಪ್ರಸ್ತಾಪನೆಗಳನ್ನು ತಿರಸ್ಕರಿಸಲಾಗುವುದು ಎಂಬುದನ್ನು ದಯವಿಟ್ಟು ಗಮನಿಸಿ.**

**ಆಯ್ಕೆ ಪ್ರಕ್ರಿಯೆ:** ಆಯ್ಕೆಯಾದ ಪ್ರಸ್ತಾಪನೆಗಳನ್ನು ಬಾಹ್ಯ ಸಮಿತಿಯು ಮೌಲ್ಯಮಾಪನ ಮಾಡುತ್ತದೆ ಮತ್ತು ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಸಮಿತಿಯ ಮುಂದೆ ಪ್ರಸ್ತುತಪಡಿಸಬೇಕಾಗುತ್ತದೆ. ಯೋಜನೆಗಳ ಆಯ್ಕೆಯ ಕುರಿತು ಐ ಫ್ ಏ ನಿರ್ಧಾರವೇ ಅಂತಿಮವಾಗಿರುತ್ತದೆ.

**ಆಯ್ಕೆಯಾದ ಎಲ್ಲಾ ಯೋಜನೆಗಳನ್ನು ಐ ಎಫ್ ಏ ಅನುಷ್ಠಾನಗೊಳಿಸುತ್ತದೆ.**

**ಪ್ರಮುಖ ದಿನಾಂಕಗಳು:**

- ಕರಡು ಪ್ರಸ್ತಾಪನೆಗಳನ್ನು ಸಲ್ಲಿಸಲು ಮತ್ತು ಪ್ರಸ್ತಾಪನೆಗೆ ಸಂಬಂಧಿಸಿದ ಟಿಪ್ಪಣಿಗಳು, ಅನುಮಾನಗಳು ಅಥವಾ ಪ್ರಶ್ನೆಗಳನ್ನು ಚರ್ಚಿಸಲು ಕೊನೆಯ ದಿನ: **ಅಕ್ಟೋಬರ್ 31, 2026**
- ಅಂತಿಮ ಪ್ರಸ್ತಾಪನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **ನವೆಂಬರ್ 30, 2026**
- ಅನುಷ್ಠಾನಕ್ಕೆ ಆಯ್ಕೆಯಾದ ಯೋಜನೆಗಳನ್ನು **ಜನವರಿ 2027**ರಲ್ಲಿ ಘೋಷಿಸಲಾಗುವುದು

***ಐ ಎಫ್ ಏ ಮಕ್ಕಳು ಮತ್ತು ಯುವಜನತೆಯನ್ನು ಬೆಂಬಲಿಸುವ, ಗೌರವಿಸುವ ಮತ್ತು ರಕ್ಷಿಸುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ ಎಂಬುದನ್ನು ದಯವಿಟ್ಟು ಗಮನಿಸಿ. ಅರ್ಜಿದಾರರು ಇದಕ್ಕೆ ಬದ್ಧರಾಗಿರಬೇಕು ಮತ್ತು ಅದನ್ನು ಎಲ್ಲಾ ಸಮಯದಲ್ಲೂ ಎತ್ತಿಹಿಡಿಯಬೇಕು.***